

# ಕಾಡುವ ಕಾಡುಸಂಪಿಗೆ

■ ಚಿತ್ರ-ಬರಹ: **ಗೀತಸದಾ, ಮೋಂತಿಮಾರು**

**ಕಾ**ಡುಸಂಪಿಗೆ ಹೂವುಗಳು ಬಿಳಿ, ನಸುಹಳದಿ ಅಥವಾ ಕೆಂಪು ಬಣ್ಣಗಳಿಂದ ಕೂಡಿದ್ದು ಆಕರ್ಷಕವಾಗಿದೆ. ಕೋಮಲವಾದ ದಳಗಳನ್ನು ಹೊಂದಿದ್ದು, ದಿವ್ಯವಾದೊಂದು ಸುವಾಸನೆಯಿದೆ. ಗೊಂಚಲುಗಳಾಗಿ ಅರಳಿ ಸೌಂದರ್ಯವನ್ನು ಬೀರುವ ಇದಕ್ಕೆ ದೇವಕಣಗಲೆ, ಗೋಣಸಂಪಿಗೆ, ದೇವಕಳ್ಳಿ ಇತ್ಯಾದಿ ಹೆಸರುಗಳೂ ಇವೆ. ಇಂಗ್ಲಿಷ್‌ನಲ್ಲಿ ಟೆಂಪಲ್‌ಟ್ರೀ ಹಾಗೂ ಸಂಸ್ಕೃತದಲ್ಲಿ ರಕ್ತಪುಷ್ಪ ಎನ್ನುತ್ತಾರೆ. ಈ ಗಿಡದ ರೆಂಬೆ ಅಥವಾ ಎಲೆಯನ್ನು ಮುರಿದರೆ ಕಳ್ಳಿಗಿಡದಂತೆ ಹಾಲು ಒಸರುವುದರಿಂದ ಇದಕ್ಕೆ ಕ್ಷೀರಚಂಪಾ ಎಂದೂ ಹೆಸರಿದೆ.

'ಎಪೋಸಿನೇಸಿಯೇ' ಕುಟುಂಬಕ್ಕೆ ಸೇರಿದ ಇದರ ಬಿಳಿಬಣ್ಣದ ಹೂವುಗಳ ಸಸ್ಯಶಾಸ್ತ್ರೀಯ ಹೆಸರು ಫ್ಲುಮೇರಿಯಾ ಆಲ್ಬ. ಕೆಂಪು ಬಣ್ಣದ ಹೂವುಗಳು ಫ್ಲಮೇರಿಯಾ ರುಬ್ರ ಎಂದು ಗುರುತಿಸಲ್ಪಡುತ್ತದೆ. ದೇವಕಣಗಿಲೆ ಗಿಡಗಳ ತಲೆಕೆಳಗಾಗಿ ಬಿದ್ದ ಗೆಲ್ಲುಗಳಾಗಲೀ, ರೆಂಬೆ-ಕೊಂಬೆಗಳಾಗಲೀ ಕೆಲವೇ ದಿನಗಳಲ್ಲಿ ಚಿಗುರಿ ಮತ್ತೆ ಹೂವರಳಿಸುವುದರಿಂದ ಇದನ್ನು ಮೃತ್ಯುಂಜಯತ್ವದ ಪ್ರತೀಕವೆಂದೂ ಕರೆಯುತ್ತಾರೆ.

ಬಹುಬೇಗನೆ ಬೆಳೆಯುವ ಬೂದುಮಿಶ್ರಿತ ಬಿಳಿಯ ಬಣ್ಣದ ಕಾಂಡವನ್ನು ಹೊಂದಿರುವ ಈ ಗಿಡದ ಹೊಳೆಯುವ ಹಸಿರು ಬಣ್ಣದ ಎಲೆಗಳು ಅಗಲವಾಗಿವೆ. ಕೆಲವು ಜಾತಿಗಳಲ್ಲಿ ಎಲೆ ತುದಿ ದುಂಡಗಾಗಿದ್ದರೆ ಉಳಿದವುಗಳ ತುದಿಗಳು ಸ್ವಲ್ಪ ಚೂಪಾಗಿರುತ್ತದೆ. ರೆಂಬೆಗಳ ತುದಿಗಳಲ್ಲಿ ವರ್ತುಲಾಕಾರವಾಗಿ ಹರಡಿಕೊಂಡಿರುವ ಎಲೆಗಳ ಮಧ್ಯೆ ಗೊಂಚಲುಗಳಲ್ಲಿ ಸ್ನಿಗ್ಧವಾದ ಐದು ದಳಗಳಿರುತ್ತವೆ. ಬಲಿತ ಕಾಂಡದಿಂದಲೇ ಸಸ್ಯಾಬಿವೃದ್ಧಿ ಮಾಡಬಹುದು.

ತೀವ್ರ ವಿರೇಚಕ ಗುಣವನ್ನು ಹೊಂದಿರುವ ಕಾಡುಸಂಪಿಗೆ, ಗೊನೋರಿಯಾ ಮೊದಲಾದ ಲೈಂಗಿಕ ಕಾಯಿಲೆಗಳ ಚಿಕಿತ್ಸೆಗೆ ಬಳಕೆಯಾಗುತ್ತದೆ. ರುಮೇಟಿಸಂ ನ ತೊಂದರೆಗೂ ಇದರ ತೊಗಟೆಯ ಹಾಲು ಹಿತಕರ. ನೋವು ನಿವಾರಕವಾಗಿ ಮತ್ತು ಅನೇಕ ಬ್ಯಾಕ್ಟೀರಿಯಾ ಹಾಗೂ ಫಂಗಸ್‌ನ ಬೆಳವಣಿಗೆಯನ್ನು ತಡೆಯಬಲ್ಲ ಗುಣ ಹೊಂದಿದೆ. ಜ್ವರವಿದ್ದಾಗ ಇದರ ಹೂವನ್ನು ವೀಳ್ಯದೆಲೆಯ ಜೊತೆಗೆ ಸೇರಿಸಿ ಅರೆದು ಸೇವಿಸುವುದರಿಂದ ಶಮನವಾಗುತ್ತದೆ. ಗಿಡದ ತೊಗಟೆಯಿಂದ ಮಾಡಿದ ಕಷಾಯ ಮಲಬದ್ಧತೆ, ಜಲೋದರ ನಿವಾರಣೆಗೆ ಉಪಯುಕ್ತ. ಗಿಡದ ಹಾಲು ಮತ್ತು ಬೇರನ್ನು ಭೇದಿಕಾರಕವಾಗಿಯೂ ಗ್ರಾಮೀಣ ಜನರು ಉಪಯೋಗಿಸುತ್ತಿದ್ದರು.

ಇತ್ತೀಚೆಗಂತೂ ಬೋನ್ಸಾಯ್ ಮಾದರಿಯಲ್ಲಿ ಈ ಗಿಡವನ್ನು ತಯಾರಿಸಿ, ಕುಂಡಗಳಲ್ಲಿ ಬೆಳೆಸುವವರೂ ಇದ್ದಾರೆ. ದೇವಕಣಗಲೆಯ ಹೂವುಗಳಿಂದ ತಯಾರಿಸಿದ ಹಾರವನ್ನು ವಿಶೇಷವಾಗಿ ದೇವರಿಗೆ ಮತ್ತು ವಿವಾಹ ಸಂದರ್ಭಗಳಲ್ಲಿ ಬಳಸುವುದು ಮಲೆನಾಡಿನಲ್ಲಿ ರೂಢಿಯಲ್ಲಿದೆ. ಸುವಾಸನಾಭರಿತವಾದ ಹೂವುಗಳನ್ನು ಹೊಂದಿರುವ ಈ ಗಿಡಗಳನ್ನು ತೆಂಗಿನತೋಟದ ಬದಿಗಳಲ್ಲಿ ಕೀಟಗಳ ಹಾವಳಿಯನ್ನು ತಡೆಗಟ್ಟಲು ಬೆಳೆಸುತ್ತಾರೆ. ಯಾವುದೇ ರೋಗಕೀಟಗಳ ಬಾಧೆಗಳಿಲ್ಲದೆ ಬಹಳ ಸುಲಭವಾಗಿ ಬೆಳೆಯುವ ಈ ಗಿಡವನ್ನು ಹಿತ್ತಲಲ್ಲಿ, ಕಾಂಪೌಂಡ್ ಮೂಲೆಯಲ್ಲಿ ಅಥವಾ ಹೂತೋಟದಲ್ಲಿ ಬೆಳೆಸಿ ಮನೆಯ ಅಂದವನ್ನು ವೃದ್ಧಿಸಬಹುದು.

